2. ಹಾಗಿದ್ದ ಪಕ್ಷದಲ್ಲಿ ಸಂಚಾರಿ ಪೊಲೀಸರು ಈ ದಿಸೆಯಲ್ಲಿ ಪ್ರಯಾಣಿಕರಿಗೆ ಪ್ರಾಮಾಣಿಕವಾಗಿ ನೆರವು ನೀಡಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

**ಶ್ರೀ ಪಿ.ಜಿ.ಆರ್.ಸಿಂಧ್ಯ (ಸಾರಿಗೆ ಸಚಿವರು.)**

1. ಆಟೋರಿಕ್ಷಾಗಳ ಚಾಲಕರು ಕರೆದ ಕಡೆಗೆ ಬಾರದಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆ. ಸಂಚಾರಿ ಪೊಲೀಸರಿಂದ ಯಾವುದೇ ನೆರವು ಸಿಗದೆ ಪ್ರಯಾಣಿಕರು ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

2. ಈ ದಿಸೆಯಲ್ಲಿ ಸಂಚಾರಿ ಪೊಲೀಸರು ಪ್ರಯಾಣಿಕರಿಗೆ ನೆರವು ನೀಡಲು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತಾರೆ.

1. ಸಾರ್ವಜನಿಕರು ಕರೆದ ಕಡೆಗೆ ಬಾರದಿರುವ ಆಟೋರಿಕ್ಷಾ ಚಾಲಕರ ವಿರುದ್ಧ ಈ ಕೆಳಕಂಡಂತೆ ಕೇಸುಗಳನ್ನು ದಾಖಲು ಮಾಡಿರುತ್ತಾರೆ.

| 1993 | 1994 | 1995 | 1996 |
|---|---|---|---|
| 7020 | 7853 | 7340 | 22620 |

2. ಆಟೋ ಚಾಲಕರ ವಿರುದ್ಧ ವಿಶೇಷ ತಪಾಸಣೆ ನಡೆಸಲಾಗುತ್ತಿದೆ.

3. ಕೆ.ಎಸ್.ಆರ್.ಟಿ.ಸಿ. ಬಸ್ ಸ್ಟಾಂಡಿಗೆ ಬಾಡಿಗೆ ಬರಲು ನಿರಾಕರಿಸುವಂತಹ ಆಟೋರಿಕ್ಷಾ ಚಾಲಕರ ವಾಹನಗಳ ಸಂಖ್ಯೆ ಮತ್ತು ಪ್ರಯಾಣಿಕರ ವಿಳಾಸಗಳನ್ನು ಬರೆದುಕೊಂಡು ಪ್ರಯಾಣಿಕರಿಗೆ ನೆರವು ನೀಡುತ್ತಿದ್ದಾರೆ.

4. ಪ್ರಯಾಣಿಕರಿಂದ ಆಟೋ ಚಾಲಕರ ವಿರುದ್ಧ ಪ್ರತ್ಯೇಕವಾಗಿ ದೂರುಗಳು ಬಂದಾಗ ಅವುಗಳನ್ನು ಸ್ವೀಕರಿಸಿ ಆಟೋರಿಕ್ಷಾ ಚಾಲಕರ ವಿರುದ್ಧ ಕ್ರಮ ಕೈಗೊಂಡು ಪಿರ್ಯಾದುದಾರರಿಗೆ ಕ್ರಮ ಕೈಗೊಂಡ ಬಗ್ಗೆ ತಿಳಿಸಲಾಗುತ್ತಿದೆ.

5. ಸಾರ್ವಜನಿಕರ ಅನುಕೂಲಕ್ಕಾಗಿ ಅವರಿಗೆ ಆಟೋರಿಕ್ಷಾ ಕಂಪ್ಲೇಂಟ್ ಕಾರ್ಡ್‌ಗಳನ್ನು ಪೊಲೀಸ್ ಠಾಣೆಗಳಲ್ಲಿ, ಬಸ್ ನಿಲ್ದಾಣ, ರೈಲ್ವೇ ಸ್ಟೇಷನ್ ಇತ್ಯಾದಿ ಸ್ಥಳಗಳಲ್ಲಿ ವಿತರಿಸಲಾಗುತ್ತಿದೆ.

6. ಆಟೋರಿಕ್ಷಾ ಚಾಲಕರಿಗೆ ಸಂಚಾರ ತರಬೇತಿ ಸಂಸ್ಥೆಯಲ್ಲಿ ಪ್ರತ್ಯೇಕವಾಗಿ ತರಬೇತಿಯನ್ನು ಸದಾ ಕೊಡಲಾಗುತ್ತಿದೆ.

7. ಕರೆದ ಕಡೆಗೆ ಬರದಿರುವುದಲ್ಲದೆ ಇನ್ನು ಇತರೇ ಸಂಚಾರ ನಿಯಮಗಳನ್ನು ಉಲ್ಲಂಘಿಸಿದಾಗಲೂ ಸಹ ಕ್ರಮ ಕೈಗೊಳ್ಳಲಾಗುತ್ತಿದೆ.

**ಬೆಂಗಳೂರಿನ ಕೆಂಪೇಗೌಡ ರಸ್ತೆ ಹಾಗೂ ಗಾಂಧಿನಗರದಲ್ಲಿ ಪುಟ್‌ಪಾತ್ ವ್ಯಾಪಾರಿಗಳ ಹಾವಳಿ ಕುರಿತು**

**250 (6) ಶ್ರೀಮತಿ ಪದ್ಮಿನೀ ನೇಸರ್ಗಿ (ಚಾಮರಾಜ ಪೇಟೆ):**

ಮಾನ್ಯ ಬೆಂಗಳೂರು ನಗರ ಅಭಿವೃದ್ಧಿ ರಾಜ್ಯಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಕೆಂಪೇಗೌಡ ರಸ್ತೆ ಹಾಗೂ ಗಾಂಧೀ ನಗರದಲ್ಲಿ ಫುಟ್‌ಪಾತ್ ವ್ಯಾಪಾರಿಗಳ ಹಾವಳಿಯಿಂದಾಗಿ ಸಾರ್ವಜನಿಕರು ಓಡಾಡಲು ಅತ್ಯಂತ ಕಷ್ಟವಾಗಿರುವ ವಿಚಾರವು ಸರ್ಕಾರದವರ ಗಮನಕ್ಕೆ ಬಂದಿದೆಯೇ;

(ಆ) ಸದರಿ ಫುಟ್‌ಪಾತ್ ವ್ಯಾಪಾರಿಗಳನ್ನು ತೆರವುಮಾಡಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ;

(ಇ) ಇಲ್ಲದಿದ್ದ ಪಕ್ಷದಲ್ಲಿ ಸಾರ್ವಜನಿಕರಿಗೆ ತೊಂದರೆಯಾಗದಂತೆ ಅವರ ವಹಿವಾಟುಗಳನ್ನು ನಡೆಸಲು ಸರ್ಕಾರದವರು ಪರ್ಯಾಯ ಕ್ರಮ ಕೈಗೊಳ್ಳುವರೇ?

**ಶ್ರೀ. ಅನಂತ್‌ನಾಗ್ (ಬೆಂಗಳೂರು ನಗರ ಅಭಿವೃದ್ಧಿ ರಾಜ್ಯ ಸಚಿವರು.)**

(ಅ) ಹೌದು.

(ಆ) ಈ ವಿಷಯದಲ್ಲಿ ಮಹಾನಗರ ಪಾಲಿಕೆಯಿಂದ ಹೊರಡಿಸಲಾಗಿರುವ ನೋಟಿಫಿಕೇಶನ್ ಸಂಖ್ಯೆ ಇಇ :ಟಿಇಸಿ:ಹೆಚ್:147, 93-94, ದಿನಾಂಕ: 30-4-97 ರಂತೆ ಪಶ್ಚಿತ ಸ್ಥಳಗಳನ್ನು ನಾನ್ ಟಾಕಿಂಗ್ ಜೋನ್ ಎಂದು ಗುರುತಿಸಿದ್ದು ಪ್ರಕಟವಾಗಿರುತ್ತದೆ. ಈ ಪ್ರಕಟಣೆಯ ಮೇಲಿನ ಅಲ್ಲಿನ ಫುಟ್‌ಪಾತ್ ವ್ಯಾಪಾರಿಗಳು ರಾಜ್ಯ ಉಚ್ಚನ್ಯಾಯಾಲಯದಲ್ಲಿ ದಾವೆ ಹೂಡಿರುತ್ತಾರೆ. ಅಲ್ಲದೆ ನ್ಯಾಯಾಲಯವು ತಡೆಯಾಜ್ಞೆ ನೀಡಿರುತ್ತದೆ. ಆದ್ದರಿಂದ ಈ ದಾವೆಗಳ ಮೇಲೆ ನ್ಯಾಯಾಲಯದಲ್ಲಿನ ತೀರ್ಪನ್ನು ಅನುಸರಿಸಿ ಅದರಂತೆ ಕ್ರಮವಹಿಸಲಾಗುವುದು.

(ಇ) ಮೇಲಿನ ಉತ್ತರ 'ಅ' ಹಿನ್ನೆಲೆಯಲ್ಲಿ ಪ್ರಶ್ನೆ ಉದ್ಭವಿಸುವುದಿಲ್ಲ.

**ಗುಳ್ಳೇದಗುಡ್ಡ ಕ್ಷೇತ್ರದಲ್ಲಿ ಬ್ರಿಡ್-ಕಮ್-ಬ್ಯಾರೇಜ್ ನಿರ್ಮಿಸುವ ಯೋಜನೆ**

**253 (146) ಶ್ರೀ. ರಾಜಶೇಖರ ವಿ ಶೀಲವಂತ (ಗುಳ್ಳೇದ ಗುಡ್ಡ):**

ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಗುಳ್ಳೇದಗುಡ್ಡ ಮತ ಕ್ಷೇತ್ರದ ಬಾದಾಮಿ ತಾಲ್ಲೂಕಿನ ಅಸಂಗಿ ಗ್ರಾಮಕ್ಕೆ ಮತ್ತು ಹುನಗುಂದ ತಾಲ್ಲೂಕಿನ ಹಿರೇಮಾಗಿ ಗ್ರಾಮಕ್ಕೆ ಬಾಂದಾರ (ಬ್ರಿಡ್ಜ್ ಕಂ ಬ್ಯಾರೇಜ್) ನಿರ್ಮಿಸುವ ಯೋಜನೆ ಸರ್ಕಾರದವರ ಪರಿಶೀಲನೆಯಲ್ಲಿದೆಯೇ;

(ಆ) ಆದ್ಯತೆಯ ಆಧಾರದ ಮೇಲೆ ಈ ವರ್ಷ ಎರಡೂ ಯೋಜನೆಗೆ ಕಾರ್ಯಾರಂಭ ಮಾಡಲಾಗುವುದೆ; ಹಾಗಿಲ್ಲದಿದ್ದಲ್ಲಿ ಇದಕ್ಕೆ ಕಾರಣಗಳೇನು?

**ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು.)**

(ಅ) ಬಾದಾಮಿ ತಾಲ್ಲೂಕಿನ ಅಸಂಗಿ ಗ್ರಾಮದ ಹತ್ತಿರ ಬ್ಯಾರೇಜ್ ನಿರ್ಮಾಣ ಕಾಮಗಾರಿಯ ಅಂದಾಜಿಗೆ ಅನುಮೋದನೆ ನೀಡಲಾಗಿದೆ. ಹುನಗುಂದ ತಾಲ್ಲೂಕಿನ ಹಿರೇಮಾಗಿ ಗ್ರಾಮದ ಬ್ಯಾರೇಜ್ ನಿರ್ಮಾಣ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

(ಆ) ಅಸಂಗಿ ಬ್ಯಾರೇಜ್ ನಿರ್ಮಾಣ ಕಾಮಗಾರಿಯನ್ನು ನಬಾರ್ಡ್‌ನ ಸಹಾಯದಿಂದ ತೆಗೆದುಕೊಳ್ಳಲಾಗಿದೆ. ಹಿರೇಮಾಗಿ ಬ್ಯಾರೇಜ್ ನಿರ್ಮಾಣಕ್ಕೆ ಅಂದಾಜನ್ನು ತಯಾರಿಸಲಾಗಿದ್ದು ಇದು ಪರಿಶೀಲನೆಯಲ್ಲಿದೆ.